R No KRNN 12

6-1-1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಶುಭ್ಯರಾವ್ ಸಂಪಾದಕರು: ಧರ್ಮಪ್ರಚಾರವಿರತ ಎಂ. ಎಸ್. ಕೃಷ್ಣರಾವ್ [3 ಸೆಂ

ಫರ್ನಾಂಡೀಸ್ ರಿಂದ ಮುಷ್ಕರ ಬೆದರಿಕೆ

ಅರಣ್ಯರ ಅಶಾಸನೆ

ಕಾವೇರಿ ಕಣಿವೆ ಅಧಿಕಾರ ಸಂಸ್ಥೆಯ ವಿಚಾರದಲ್ಲಿ ಕರ್ನಾಟಕವು ಇನ್ನೂ ಕಡೇ ಮಾತು ತಿಳಿಸಿಲ್ಲವೆಂದೂ ಹುಬ್ಬಳ್ಳಿಯಲ್ಲಿ ಶನಿವಾರ ಕೆ ಪಿ ಸಿ ಸಿ ಯಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರು ತಿಳಿಸಿದರು.

★

ಮುಳುಗಿದವು

ತಾಸ್ಕೆಂಟಿನಿಯಾದ ಹೋಟೆಲ್‌ನಿಂದ ಬಂದಿರುವ ವರದಿಯ ಪ್ರಕಾರ, ಡವೆಂಟ್ ನದಿಯ ದೋಣಿಯ ತಾಸ್ಕಾನ್ ಸೇತುವೆಗೆ ಹಡಗೊಂದು ಡಿಕ್ಕಿ ಬಡಿದು, ಒಂದು ಭಾಗ ಸೇತುವೆ ಹಾಗೂ ಹಡಗು ಮುಳುಗಿದವು.

○

ಜಯಪ್ರಕಾಶರ ಟೀಕೆ

ಉಜ್ಜಯಿನಿಯಲ್ಲಿ ಶ್ರೀ ಜಯಪ್ರಕಾಶ ನಾರಾಯಣರು ಭಾಷಣ ಮಾಡುತ್ತಾ, ಗಾಂಧೀಜಿ ತೋರಿಸಿದ ಮಾರ್ಗದಲ್ಲಿ ತಾವು ನಡೆಯುತ್ತಿರುವುದಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಹೇಳಿದುದನ್ನು ಕಟುವಾಗಿ ಟೀಕಿಸಿದರು.

★

ವಾನಪ್ರಸ್ಥ

ಹುಬ್ಬಳ್ಳಿ — ರಾಜ್ಯದಲ್ಲಿ ವಾನಪ್ರಸ್ಥ ಪುನರ್ಜಾರಿಯಾಗಬೇಕೆಂಬ ಖಾಸಗಿ ಠರಾವು ಕೆ ಪಿ ಸಿ ಸಿ ಅಂಗೀಕರಿಸಿತು.

★

ಮಿಲಿಟರಿ ಕೈವಾಡವಿಲ್ಲ

ವಾಷಿಂಗ್ಟನ್— ಅತಿ ತೀವ್ರ ತುರ್ತು ಪರಿಸ್ಥಿತಿಯಲ್ಲಿ ವಿನಃ, ಮಿಕ್ಕ ಸಂದರ್ಭದಲ್ಲಿ ಎಣ್ಣೆ ಉತ್ಪಾದನಾ ರಂಗಗಳ ಮೇಲೆ ಅಮೇರಿಕಾ ಮಿಲಿಟರಿ ಕೈವಾಡಕ್ಕೆ ಸ್ಟೇಟ್ ಸೆಕ್ರೆಟರಿ ಕಿಸಿಂಗರರು ವಿರೋಧಿಸಿದ್ದಾರೆ; ತೈಲಅಸಂಯಕಾರಿಗಳು ಎಂದಿದ್ದಾರೆ

ವಿಶೇಷ ಸ್ಥಾನಮಾನ ಬೇಡ

ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೈಗೊಳ್ಳಬಾರದೆಂದು ಜಮ್ಮುವಿನಲ್ಲಿ ಪೇರ್ ಅಬ್ದುಲ್ಲರು ಪತ್ರಿಕೆಯವರಿಗೆ ತಿಳಿಸಿದರು

●

ಚೀಣಾಕ್ಕೆ ನಾಗಾ ದೌರ್ಜನ್ಯರು

ಕೊಹಿಮಾ– ಚೀಣಾಕ್ಕೆ ಹೊರಟಿರುವ 15 ಹುಡುಗಿಯರೂ ಸೇರಿ 150 ಮಂದಿ ನಾಗಾ ದೌರ್ಜನ್ಯರು ನಾಗಾಲ್ಯಾಂಡಿನ ಮೊಕೋಕಚಿಂಗ್‌ದಲ್ಲಿ ಶಿಬಿರದಲ್ಲಿರುವರೆಂದು ವರದಿಯಾಗಿದೆ

●

ಅಮೇರಿಕಾ ನ್ಯಾಯವಾದಿ

ಹುಬ್ಬಳ್ಳಿಯಲ್ಲಿ ಕೆ ಪಿ ಸಿ ಸಿ ಯಲ್ಲಿ ಶ್ರೀ ಡಿ ದೇವರಾಜ ಅರಸ್‌ರವರು ಮಾತನಾಡುತ್ತಾ, ಕೃಷ್ಣ ನಿರಿನ ನ್ಯಾಯಮಂಡಲಿಯು ಮುಂದೆ ಕರ್ನಾಟಕದ ಪರ ವಾದಿಸಲು, ಪ್ರಖ್ಯಾತ ಅಮೇರಿಕಾ ನ್ಯಾಯವಾದಿಯನ್ನು ನೇಮಿಸಲಾಗುವುದೆಂದು ತಿಳಿಸಿದರು. ಈ ಬಗ್ಗೆ ಬೇಕಾಗುವ ವಿದೇಶೀ ವಿನಿಮಯಕ್ಕೆ ಕೇಂದ್ರವನ್ನು ಕೇಳಲಾಗುವುದು ಎಂದರು.

●

ಥಟ್ಟನೆ ಚುನಾವಣೆಗೆ ಸೈ

ಬೆಳಿಸಗಾಂ– ಅಡಳಿತ ಪಕ್ಷವು ಥಟ್ಟನೆ ಚುನಾವಣೆ ನಡೆಸಿದರೂ, ಅದಕ್ಕೆ ಹಳೇ ಕಾಂಗ್ರೆಸ್ ಸಿದ್ಧವಿರಲು. ಅಖಿಲ ಭಾರತ ಹಳೇ ಕಾಂಗ್ರೆಸ್ ಸಮಿತಿಯು, ತನ್ನ ಕಡೆಯವರಿಗೆ ಕರೆಕೊಟ್ಟಿದೆ

★

ಲಾಟರಿ

ಬೆಂಗಳೂರು– ಭಾನುವಾರ ತೆಗೆದ ಕರ್ನಾಟಕ ಲಾಟರಿಯಲ್ಲಿ ರೂ 1 ಲಕ್ಷ ಬಹುಮಾನ ಅಹಮದಾಬಾದು ಮತ್ತು ಕಲ್ಲಿಕೋಟೆಯಲ್ಲಿ ಮಾರಲಾದ ಟಿಕೇಟುಗಳಿಗೆ ಸಿಕ್ಕಿತು.

ಜೆ ಪಿ ಯವರು

ಭೂಪಾಲ್— ಇಲ್ಲಿಯ ರೈಲ್ವೇ ಸ್ಟೇಷನ್ನಿಗೆ ತಮ್ಮನ್ನು ಸ್ವಾಗತಿಸಲು ಬಂದ ಭಾರಿ ಯುವಕರ ವಿದ್ಯಾರ್ಥಿಗಳ, ಪೌರರ ಸಭೆಯಲ್ಲಿ ಮಾತನಾಡುತ್ತಾ, ಶ್ರೀ ಜಯಪ್ರಕಾಶ ನಾರಾಯಣರು, ಈಗ ಬೀಹಾರಿನಲ್ಲಿ ಕಾಣಬರುತ್ತಿರುವ ಸನ್ನಾಧಾನ ಪರಿಸ್ಥಿತಿ ಹೋಗಿ, ಚಳುವಳಿ ತೀವ್ರಗೊಳಿಸಲಾಗುವುದೆಂದು ಹೇಳಿದರು – ಕಾಂಗ್ರೆಸ್ ಸೋಲಿನ ನಂತರ ಜನತಾ ಸರ್ಕಾರ ಸ್ಥಾಪನೆಗೆ ಚಳವಳಿ ಮುಂದುವರಿಸಬೇಕೆಂದರು.

★

ಅರಮನೆ ನೌಕರರ ಮನೇಲಿ ಸಿಕ್ಕಿದ್ದು

ಮೈಸೂರು – ಅರಮನೆ ಮಾಜಿ ನೌಕರರೊಬ್ಬರ ಮನೆ ಮೇಲೆ ಕೇಂದ್ರ ಎಕ್ಸೈಜ್ ಜೀವರು ಧಾಳಿ ನಡೆಸಿ, ರೂ 2 18 ಲಕ್ಷ ಬೆಲೆಯ ಚಿನ್ನ ಮತ್ತು ಆಭರಣ, ಮತ್ತು ಲೆಖ್ಖದಲ್ಲಿ ಕಾಣಿಸದಿದ್ದ ರೂ. 2 87 ಲಕ್ಷ ಹಣವನ್ನು ಶುಕ್ರವಾರ ವಶಪಡಿಸಿಕೊಂಡರು

★

ರಷ್ಯಾದ ಸುಸ್ಥಿತಿ !

ಮಾಸ್ಕೋ— ಪಶ್ಚಿಮದಲ್ಲಿರುವಂತೆ, ರಷ್ಯಾದಲ್ಲಿ, ಆರ್ಥಿಕ ಉತ್ಕಟತೆ. ನಿರುದ್ಯೋಗ, ಹಣದುಬ್ಬರ ಇಲ್ಲವೆಂದೂ. ಆದರೆ ಕೈಗಾರಿಕೆಯಲ್ಲಿ ಅಕ್ರಮ ಆಡಳಿತ, ದುಂದು ಖರ್ಚು, ಅಸಮರ್ಥತೆ ಇದೆ ಎಂದೂ ಪ್ರಾವ್ದಾ ಪ್ರಕಟಿಸಿದೆ

●

ಕಟ್ಟುನಿಟ್ಟು ಆದೇಶ

ಹುಬ್ಬಳ್ಳಿ— ಗ್ರಾಮಾಂತರ ಭೂಹಿತರಿಗೆ ಗುರಿ ಇಟ್ಟಿರುವ ನಿವೇಶನಗಳನ್ನು ಫೆಬ್ರವರಿ 15 ರೊಳಗೆ ಹಂಚಿರಬೇಕೆಂದು ಕೆ ಪಿ ಸಿ ಸಿ ಅಧ್ಯಕ್ಷರು ಸರಕಾರಕ್ಕೆ ತೀವ್ರವಾಗಿ ತಿಳಿಸಿರುತ್ತಾರೆ.

ಮುಷ್ಕರದ ಬೆದರಿಕೆ

ಶಿವಮೊಗ್ಗ— ತೆಗೆದುಹಾಕಲ್ಪಟ್ಟಿರುವ 20000 ರೈಲ್ವೆ ನೌಕರರನ್ನು ಕೇಂದ್ರ ಸರಕಾರ ಕೆಲಸಕ್ಕೆ ತೆಗೆದುಕೊಳ್ಳುವವರೆಗೂ ವಿಶ್ರಮಿಸಲಾರೆವು. ದೇಶಾದ್ಯಂತ ಮುಷ್ಕರ ಹೂಡಲಾಗುವುದೆಂದು ಸೋಷಲಿಸ್ಟ್ ಪಾರ್ಟಿ ನಾಯಕ ಜಾರ್ಜ್ ಫರ್ನಾಂಡಿಸ್ ಬೆದರಿಕೆ ಹಾಕಿರುವರು

★

ಮಾಜಿ ಮೇಯರರ ಬಗ್ಗೆ ತನಿಖೆ

ಹುಬ್ಬಳ್ಳಿ— ಬೆಂಗಳೂರು ನಗರಸಭಾ ಕಾಂಗ್ರೆಸ್ ಪಾರ್ಟಿ ನಾಯಕರೂ, ಮಾಜಿ ಮೇಯರರೂ ಆದ ಶ್ರೀ ಎಂ ವಿ ತಿವಾರಿ ಮತ್ತು ಈಗಿನ ಉಪಮೇಯರ್ ಶ್ರೀ ಅಜಿ ಮಾತಿಲಾಲರ ಮೇಲಿನ ಆಪಾದನೆಗಳ ವಿಚಾರಣೆಗಾಗಿ ಕೆ ಪಿ ಸಿ ಅಧ್ಯಕ್ಷರು ಮೂರು ಸದಸ್ಯರ ಸಮಿತಿ ನೇಮಿಸಿರುವರು – ಇವರು ಹೆಚ್ಚು ಆಸ್ತಿ ಶೇಖರಿಸಿರುವರೆಂದೂ ನಗರ ಸಭಾ ಕಾರ್ಯದಲ್ಲಿ ಅಕ್ರಮವಾಗಿ ವರ್ತಿಸಿರುವರೆಂದೂ ಆಪಾದಿಸಲಾಗಿದೆ.

★

ಕೇಂದ್ರದಿಂದ ತನಿಖೆ

ಪಾಟ್ನಾ– ರೈಲ್ವೆ ಮಂತ್ರಿ ಶ್ರೀ ಎಲ್. ಎನ್. ಮಿಶ್ರರ ನಿಧನಕ್ಕೆ ಕಾರಣವಾದ ಬಾಂಬು ಸ್ಫೋಟದ ವಿಷಯದಲ್ಲಿ ತನಿಖೆಗೆ ಕೇಂದ್ರವು ಉನ್ನತಾಧಿಕಾರದ ಸಮಿತಿಯನ್ನು ನೇಮಿಸಲಿದೆ

★

ಇಂದಿರಾ ಬ್ರಿಗೇಡಿನ ಮೇಲೆ ಆಪಾದನೆ

ಬೆಂಗಳೂರು— ಇಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಮಿತಿಯು, ಕಾಂಗ್ರೆಸ್ಸಿಗೆ ಗುರುವಾರ ನಡೆದ ಚುನಾವಣೆ ಸಂಬಂಧದಲ್ಲಿ ಎರಡು ಗುಂಪುಗಳಲ್ಲಿ ಆದ ಘರ್ಷಣೆಗೆ ಇಂದಿರಾ ಬ್ರಿಗೇಡು ಕಾರಣವೆಂದು ಆಪಾದಿಸಿದೆ

★

(2)

ಅಕ್ಕಿ ಬೆಲೆ

ಚಿತ್ರದುರ್ಗ– ಇಲ್ಲಿ ಉತ್ತಮ ಅಕ್ಕಿ ಬೆಲೆಕಿಲೋಗೆ ರೂ. 3–10 ಕ್ಕೆ ಏರಿದೆ.

★

ದುರಂತ

ತ್ರಿವೇಂದ್ರಂ—ಕೊಡೈಕಾಡ್ ಹತ್ತಿರ ಒಂದು ಸರ್ಕಾರಿ ಬಸ್‌ಗೂ ಒಂದು ಟೆಂಪೊ ವ್ಯಾನ್ಗೂ ಡಿಕ್ಕಿ ಆಗಿ 13 ಜನ ಸತ್ತರು.

★

ರಾಜ್ಯಕ್ಕೆ ಭೂತಾನ್ ದೊರೆ ಭೇಟಿ

★

ಭಾರತಕ್ಕೆ ಹತ್ತು ದಿನಗಳ ಭೇಟಿ ನೀಡಿದ್ದ ಭೂತಾನ್ ದೊರೆಗಳಾದ ಜಗ್ಮೆ ವಾಂಗ್‌ಚುಕ್‌ರವರು ಬೆಂಗಳೂರು ನಗರಕ್ಕೆ ಇದೇ ಡಿಸೆಂಬರು 26 ರಂದು ಆಗಮಿಸಿದ್ದರು; ರಾಜ್ಯಪಾಲರಾದ ಶ್ರೀ ಮೋಹನಲಾಲ ಸುಖಾಡಿಯಾ, ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್, ಬೆಂಗಳೂರು ನಗರ ಮೇಯರ್ ಶ್ರೀ ಟಿ. ಡಿ. ನಾಗಣ್ಣ ಅವರುಗಳು ಅತಿಥಿಗಳನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

ತಮ್ಮ ಭೇಟಿಯ ಅವಧಿಯಲ್ಲಿ ಶ್ರೀ ಜಿಗ್ಮೆ ಸಿಂಘೆ ವಾಂಗ್‌ಚುಕ್‌ರವರಿಗೆ ಹೆಚ್ ಎಂ ಟಿ ಗಡಿಯಾರ ಕಾರ್ಖಾನೆಗೆ ಭೇಟಿನೀಡಿ ಅಲ್ಲಿನ ಪ್ರಗತಿಯ ಬಗ್ಗೆ ಪ್ರಶಂಸಿಸಿದರು. ವಾಂಗ್‌ಚುಕ್‌ರವರಿಗೆ 'ಜವಹರ್" ಕೈಗಡಿಯಾರವನ್ನೂ, ಭೂತಾನಿನ ಅಭಿವೃದ್ಧಿ ಕಾರ್ಯದಲ್ಲಿ ದೊರೆಯ ಪ್ರತಿನಿಧಿ ಆಗಿರುವ ಶ್ರೀಮತಿ ಆಶಿ ವಾಂಗ್‌ಚುಕ್‌ರಿಗೆ 'ನೂತನ್" ಕೈಗಡಿಯಾರವನ್ನೂ ನೆನಪಿನ ಕೊಡುಗೆಯಾಗಿ ನೀಡಲಾಯಿತು.

ವುಡ್‌ಲಾಂಡ್ 3 1 75 ರಿಂದ

ಅಮೋಘ 4 ನೇ ವಾರ

ಚ ಟ್ಟ ಕ್ಕಾ ರಿ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಪಾತ್ರ — ಲಕ್ಷ್ಮೀ ಮೋಹನ್ ದಿನ 3 ಪ್ರದರ್ಶನಗಳು

ಅ ಪೆ ರಾ 3 1 75 ರಿಂದ

ಅ ಬ್ಬು – ತ ಂ ಗ್ಳ

ಮುತ್ತುರಾಮನ್ ಜಯಲಲಿತ

ಅಭಿನಯಿಸಿರುವ

ಅಮೋಘ ತಮಿಳು ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

—Humanitarian Propaganda Monthly....

Protect the Cow

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ



Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore